# ರೋಟರ್ಯಾಕ್ಟ್ ಕ್ಲಬ್‌ನ ಪದಗ್ರಹಣ




**ಕಾರ್ಕಳ:** ರೋಟರ್ಯಾಕ್ಟ್ ಕ್ಲಬ್ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುವುದಲ್ಲದೇ, ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಬದ್ಧತೆ, ಭಾತೃತ್ವ ಮತ್ತು ಸೇವಾ ಮನೋಭಾವ ಬೆಳೆಸುತ್ತವೆ ಎಂದು ರೋಟರಿ ಜಿಲ್ಲೆ 3182ರ ಜಿಲ್ಲಾ ರೋಟರ್ಯಾಕ್ಟ್ ಪ್ರತಿನಿಧಿ ಪ್ರಕಾಶ್ ನಾಯಕ್ ಹೇಳಿದ್ದಾರೆ.

ಎಂಪಿಎಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಸಕ್ತ ಸಾಲಿನ ನೂತನ ರೋಟರ್ಯಾಕ್ಟ್ ಕ್ಲಬ್‌ನ ಪದಗ್ರಹಣ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ರೋಟರಿ ಕ್ಲಬ್ ಅಧ್ಯಕ್ಷ ಜಗದೀಶ್ ಟಿ.ಎ. ನೂತನ ಕ್ಲಬ್‌ನ ಅಧ್ಯಕ್ಷರಾಗಿ ನಿಯೋಜನೆಗೊಂಡ ತೃತೀಯ ಬಿಕಾಂನ ವಿವೇಕ್ ಶೆಟ್ಟಿ ಅವರ ಪದಗ್ರಹಣ ನೆರವೇರಿಸಿದರು. ರೋಟರ್ಯಾಕ್ಟ್ ಕ್ಲಬ್ ಪೂರ್ವ ಅಧ್ಯಕ್ಷ ಮಂಜೇಶ್ ಶೆಟ್ಟಿ ಅಧಿಕಾರ ಹಸ್ತಾಂತರಿಸಿದರು. ಜಿಲ್ಲಾ ರೋಟರಿ ಸಭಾಪತಿ ಜಗನ್ನಾಥ ಕೋಟೆ ಮಾತನಾಡಿದರು.

ಪ್ರಾಚಾರ್ಯ ಪ್ರೊ. ಶ್ರೀವರ್ಮ ಅಜ್ರಿ ಎಂ., ರೋಟರ್ಯಾಕ್ಟ್ ಕ್ಲಬ್ ಪೂರ್ವ ಸಭಾಪತಿ ರೇಖಾ ಉಪಾಧ್ಯಾಯ, ಸಭಾಪತಿ ರೋಶನ್ ಡಿಮೆಲ್ಲೊ, ವಸಂತ್, ರೋಟರ್ಯಾಕ್ಟ್ ಕ್ಲಬ್ ಸಭಾಪತಿ, ಗ್ರಂಥಪಾಲಕ ವೆಂಕಟೇಶ್, ಪ್ರಾಧ್ಯಾಪಕರಾದ ಜ್ಯೋತಿ ಎಲ್.ಜೆ., ಸುಷ್ಮಾ ಮೈತ್ರಿ, ವಿದ್ಯಾಧರ ಹೆಗ್ಡೆ ಗಣೇಶ, ನವೀನ, ಸುಮಂತ್ ಜೈನ್, ಯೋಗೇಶ್, ಕಾರ್ಕಳ ರೋಟರ್ಯಾಕ್ಟ್ ಕ್ಲಬ್‌ನ ಚೇತನ್, ನಿಶ್ಚಿತ್, ಸುನಿಲ್, ಅಜಯ್ ಮತ್ತು ವಿಖ್ಯಾತ್ ಇದ್ದರು. ಕೃತಿಕಾ ನಿರೂಪಿಸಿದರು. ಅಶ್ವಿತಾ ಹೆಗ್ಡೆ ವರದಿ ವಾಚಿಸಿದರು. ಪ್ರಜ್ಞಾ ವಂದಿಸಿದರು.